ನಾಳೆ ಖಂಡಿತ ಅದನ್ನು ಸರಿಮಾಡಿ ಕೊಡುತ್ತೇನೆ," ಎಂದು ಭರವಸೆಯಿತ್ತ.

ಮರುದಿನ ಬೆಳಿಗ್ಗೆ ಆತನ ಸ್ಟುಡಿಯೊ ತಲುಪಿದರು. ಜೋಯಿಸರ ಫೋಟೊ ತೆಗೆದುಕೊಂಡ. ಇನ್ನೇನು ಆ ಹಳೆಯ ಫೋಟೊವನ್ನು ಕಂಪ್ಯೂಟರಿನಲ್ಲಿ ಸ್ಕ್ಯಾನ್ ಮಾಡಲು ಹೊರಡುತ್ತಿದ್ದಂತೆ ಮತ್ತೆ ಕರೆಂಟ್ ಹೋಯಿತು. ಆ ದಿನ ಮಂಗಳವಾರ. ಇವತ್ತಿಡೀ ಕರೆಂಟು ಬರುವುದಿಲ್ಲವೆಂದು, "ಜೋಯಿಸರೆ ಬೇಜಾರು ಮಾಡಬೇಡಿ, ನಾಳೆಯೇ ನಾನು ಇದನ್ನು ಸರಿ ಮಾಡಿ ನಿಮ್ಮ ಮನೆಗೆ ತಲುಪಿಸುತ್ತೇನೆ. ನಿಮ್ಮ ವಿಳಾಸ ಕೊಡಿ," ಎಂದು ವಿಳಾಸ ಬರೆದುಕೊಂಡು ಜೋಯಿಸರನ್ನು ಕಳುಹಿಕೊಟ್ಟ. ಜೋಯಿಸರು ಅರ್ಧಬಂರ್ಧ ಸಂತಸದಿಂದ ಹೊರಟರು.

★★★

ಇವತ್ತಿನ ದಿನ ಕರೆಂಟಿಲ್ಲ ಎಂದು ಸ್ಟುಡಿಯೊ ಬಾಗಿಲು ಹಾಕಿ ತನ್ನ ಗೆಳೆಯರ ಜೊತೆಗೆ ಸಿನಿಮಾ ನೋಡಲು ಹೋದ. ಮರುದಿನವೆನ್ನುವಷ್ಟು ಹೊತ್ತಿಗೆ ಭಾಸ್ಕರ ಕೆಲಸದ ಗಡಿಬಿಡಿಯಲ್ಲಿ ಜೋಯಿಸರು ಕೊಟ್ಟ ಫೋಟೊವನ್ನು ಕಳೆದುಕೊಂಡು ಬಿಟ್ಟಿದ್ದ. ಎಂಥ ತಪ್ಪು ಮಾಡಿಬಿಟ್ಟೆನೆಂದು ಪರಿತಪಿಸಿದ. ನಿನ್ನೆಯಷ್ಟೆ ತೆಗೆದಿದ್ದ ಜೋಯಿಸರ ಫೋಟೊವನ್ನೊಮ್ಮೆ ನೋಡಿದ. ನನ್ನ ಬರುವಿಕೆಗಾಗಿಯೇ ಕಾಯುತ್ತ ಕುಳಿತಂತೆ ಕಂಡಿತು. ಆದರೆ ನಾನು ಹೋಗದೇ ಇರುವುದು ಸರಿಯಲ್ಲ. ಅವರಲ್ಲಿ ಇನ್ನೊಂದು ಫೋಟೊ ಇರಬಹುದು. ಅಥವಾ ಸೀತಮ್ಮ ಒಬ್ಬರೇ ಇರುವ ಫೋಟೊವಾದರೂ ಇರಬಹುದು. ಅದನ್ನೇ ತಂದು ಎರಡನ್ನೂ ಜೋಡಿಸಿ ಕೊಡುವ ಎಂದುಕೊಂಡ. ಈಗಾಗಲೇ ತೆಗದ ಫೋಟೊಗೆ ಕಟ್ಟುಹಾಕಿಸಿ ಇದನ್ನೂ ಜೋಯಿಸರಿಗೆ ಕೊಡುವ ಎಂದುಕೊಂಡು ಅವರ ವಿಳಾಸ ಹಿಡಿದುಕೊಂಡು ಆ ಕೂಡಲೆ ಹೊರಟ.

ಭಾಸ್ಕರ ಸರಿಯಾದ ವಿಳಾಸಕ್ಕೇ ಬಂದು ತಲುಪಿದ್ದ. ಕೇಶವ ಜೋಯಿಸರು ಎಷ್ಟೊಂದು ದೂರದಿಂದ ನನ್ನಲ್ಲಿಯವರೆಗೆ ಬಂದಿದ್ದಾರೆ. ಪಾಪ ಎಂದುಕೊಳ್ಳುತ್ತ ತನ್ನ ಬೇಜವಾಬ್ದಾರಿತನಕ್ಕೆ ಇಷ್ಟು ಬೈದುಕೊಂಡ. ಲಲಿತಾ ಬಾಗಿಲು ತೆಗೆದು, ಪರಿಚಯವಿಲ್ಲದ ಮುಖ ನೋಡಿ ಗಾಬರಿಗೊಳಗಾದಂತೆ, ''ಯಾರು?'' ಎಂದು ಕೇಳಿದಳು.

"ಇದು ಕೇಶವ ಜೋಯಿಸರ ಮನೆ ತಾನೆ? ನಾನು ಅವರಿಗೆ ಗೊತ್ತಿರುವ ವ್ಯಕ್ತಿ."

"ಹೌದು... ಏನಾಗಬೇಕಿತ್ತು?"

ಭಾಸ್ಕರ ಹೊರಗಿನಿಂದಲೇ ಒಳಗಡೆ ಇಣುಕಿದ. ಜೋಯಿಸರು ತಂದಿದ್ದಂತಹದೇ ಇನ್ನೊಂದು ಫೋಟೊ ಅವರ ಮನೆಯ ಗೋಡೆಯಲ್ಲಿ ನೇತಾಡುತ್ತಿತ್ತು. ಆ ಫೋಟೊದಲ್ಲೂ ಜೋಯಿಸರಿದ್ದ ಕಡೆ ಹಾಳಾಗಿ ಹೋಗಿತ್ತು. ಅದನ್ನೆ ದಿಟ್ಟಿಸುತ್ತಿದ್ದವನಿಗೆ ಲಲಿತಾ ಪುನಃ "ಏನಾಗಬೇಕಿತ್ತು?" ಎಂದು ಕೇಳಿದಳು.

"ಮೊನ್ನೆ ಅವರು ಒಂದು ಫೋಟೊ ತೆಗೆಸಲು ಬಂದಿದ್ದರು, ಅದನ್ನು ಕೊಟ್ಟು ಹೋಗಲು ಬಂದೆ," ಎಂದ.

ಲಲಿತಾಳಿಗೆ ಆಶ್ಚರ್ಯವಾಯಿತು. "ಮೊನ್ನೆ ಎಂದರೆ ಯಾವಾಗ? ಏನು ಹೇಳುತ್ತಿದ್ದೀರಿ?" ಎಂದು ಕೇಳಿದಳು.

"ಮೊನ್ನೆ ಅಂದರೆ ಸೋಮವಾರ... ಇದೇ ಕಳೆದ ಸೋಮವಾರ ಇವತ್ತು ಬುಧವಾರ ತಾನೆ..."

"ಸಾಧ್ಯವೇ ಇಲ್ಲ... ಏನೇನೋ ಸುಳ್ಳು ಹೇಳಿಕೊಂಡು ಮನೆಯೊಳಗೆ ಬರಬೇಡಿ."